


# ಬಣ್ಣಿಸಲಾಗದ ವ್ಯಕ್ತಿತ್ವ

**ಶ್ಯಾಮ್ ಬೆನೆಗಲ್**

ಗಿರೀಶ ಕಾರ್ನಾಡರ ಗುಣವನ್ನು ಹೇಗೆ ಬಣ್ಣಿಸಲಿ? ಅವರು ಅತ್ಯುತ್ತಮ ಸ್ನೇಹಿತ.

ದೀರ್ಘಕಾಲಿಕ ಗೆಳೆತನ ನಮ್ಮದು. ನನ್ನಂತೆಯೇ ಅವರದ್ದೂ ಕೊಂಕಣಿ ಮಾತೃಭಾಷೆ. ಆದರೂ ನಾಲ್ಕು ಭಾಷೆಗಳಲ್ಲಿ ಅಸ್ಖಲಿತವಾಗಿ ವಿಷಯ ಮಂಡಿಸುವ ಶಕ್ತಿ ಅವರಿಗಿತ್ತು. ಅದಕ್ಕೂ ಮಿಗಿಲಾಗಿ ಅವರೊಬ್ಬ ಶ್ರೇಷ್ಠ ನಾಟಕಕಾರ. ಕಳೆದ ಅರ್ಧ ಶತಮಾನದಲ್ಲಿ ಭಾರತ ಕಂಡ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬರು.

ಸಜ್ಜನ. ಒಳ್ಳೆಯ ಮನುಷ್ಯ. ಬುದ್ಧಿವಂತ. ವಿಚಾರವಂತ. ಸಾಮಾಜಿಕ ನ್ಯಾಯದ ಪ್ರಜ್ಞೆ ಇಟ್ಟುಕೊಂಡಿದ್ದವರು. ಅನ್ಯಾಯ ಆಗುತ್ತಿದೆ ಎಂದೆನಿಸಿದಾಗಲೆಲ್ಲ ತೀವ್ರವಾಗಿ ಪ್ರತಿಭಟಿಸುತ್ತಿದ್ದರು. ಆ ಹಾದಿಯಲ್ಲಿ ಎಂಥ ಕಷ್ಟಗಳೇ ಎದುರಾದರೂ ಜಗ್ಗುತ್ತಿರಲಿಲ್ಲ. ಅವರೆಷ್ಟು ಬುದ್ಧಿವಂತರೆನ್ನುವುದನ್ನು ನಾನು ಖುದ್ದು ಭೇಟಿಯಾಗುವ ಮೊದಲೇ ನನ್ನ ಸಹೋದರ ನನಗೆ ತಿಳಿಸಿದ್ದ. ನನ್ನ ಸಹೋದರ ಧಾರವಾಡದ ಕಾಲೇಜಿನಲ್ಲಿ ಅವರನ್ನು ಕಂಡಿದ್ದ. ಆಕ್ಸ್‌ಫರ್ಡ್‌ಗೆ ಆಗಲೇ ಅವರು ಲೇಖನಗಳನ್ನು ಬರೆದು ಕಳುಹಿಸುತ್ತಿದ್ದುದು, ಪ್ರಾಜ್ಞರ ಸಹವಾಸ ಇವೆಲ್ಲವನ್ನೂ ಅವನು ನನಗೆ ತಿಳಿಸಿದ್ದ.



ಬಾಲ್ಯದ ದಿನಗಳು

ಆಮೇಲೆ ನನಗೆ ಅವರ ಪರಿಚಯವಾಯಿತು. ಸ್ನೇಹಿತರಾದೆವು. ಅಷ್ಟೇ ಅಲ್ಲ, ನನಗಾಗಿ ಬರೆದುಕೊಡುವಂತೆ ಅವರನ್ನು ಕೇಳಿಕೊಂಡೆ. ಅದಕ್ಕೂ ಒಪ್ಪಿದರು. ‘ನಿಶಾಂತ್’, ‘ಮಂಥನ್’ಗೆ ಚಿತ್ರಕಥೆ ಬರೆದುಕೊಟ್ಟರು. ಅಷ್ಟೇ ಅಲ್ಲದೆ ಅಭಿನಯಿಸಿದರು. ರಾಷ್ಟ್ರಪ್ರಶಸ್ತಿಯ ಗರಿಯೂ ಚಿತ್ರಕಥೆಗೆ ಸಿಕ್ಕಿತು. ಪದಗಳಲ್ಲಿ ಬಣ್ಣಿಸಲಾಗದ ವ್ಯಕ್ತಿತ್ವ ಅವರದ್ದು. ನಾನು ಹೆಚ್ಚು ಗೌರವಿಸುವ ವ್ಯಕ್ತಿ. ನಮ್ಮ ಸ್ನೇಹದ ಬದ್ಧತೆಯನ್ನು ನೆನೆಯಲೇಬೇಕು. ಈಗ ಅವರಿಲ್ಲ. ಅವರನ್ನು ಮಿಸ್ ಮಾಡಿಕೊಳ್ಳುತ್ತೇನೆ ಎಂದಷ್ಟೇ ಹೇಳಬಲ್ಲೆ. ●